ಮಾಯಿಲನ ವಾದವನ್ನೇ ಆತನ ಮುಂಬೈಯ ಗಂಡುಮಕ್ಕಳೂ ಒಕ್ಕೊರಲಿನಿಂದ ಅನುಮೋದಿಸುತ್ತಾರೆ. ಅವರು ಅಪ್ಪ ಹಾಕಿದ ಗೆರೆಯನ್ನು ದಾಟದಿರುವುದು ಕೃಷ್ಣಪ್ಪನಿಗೆ ಉಸಿರೆತ್ತುವ ಅವಕಾಶವನ್ನೇ ಕಸಿದುಕೊಂಡಿದೆ.

ಕೃಷ್ಣಪ್ಪ ದುಗ್ಗನ ಮನೆಬಾಗಿಲಿಗೆ ಬಂದಾಗ ದುಗ್ಗ, ಮನೆಯಲ್ಲಿರಲಿಲ್ಲ. ಆತನ ಹೆಂಡತಿ ಮಾಚು ಕೋಲದ ದಿರಿಸುಗಳನ್ನು ಬಿಸಿಲಿಗೆ ಹಾಕಿ ಒಣಗಿಸುತ್ತಿದ್ದಳು. ಕೃಷ್ಣಪ್ಪನನ್ನು ನೋಡಿದವಳೇ 'ಅವರಿಲ್ಲ, ಕಾರ್ಕಳಕ್ಕೆ ಹೋಗಿದ್ದಾರೆ' ಎಂದಾಗ ಕೃಷ್ಣಪ್ಪ ಮುಂಗಡವನ್ನು ಆಕೆಯಲ್ಲೇ ಕೊಟ್ಟುಬಿಡಲು ನಿರ್ಧರಿಸಿ ಕೊಟ್ಟೂಬಿಟ್ಟ. ಅಪ್ಪ ಕೊಟ್ಟ ಕೋಲದ ದಿನವನ್ನು ಚೀಟಿಯೊಂದರಲ್ಲಿ ಬರೆದು ಮಾಚುವಿನ ಕೈಯಲ್ಲಿಟ್ಟು ಆಕೆಯ ಮುಖವನ್ನೂ ದಿಟ್ಟಿಸದೆ ಸರಸರನೆ ಹೊರಟೇಬಿಟ್ಟ.

ಕೃಷ್ಣಪ್ಪನಿಗೆ ಯಾಕೋ ಏನೋ ದುಗ್ಗನ ಹೆಸರೆತ್ತಿದರೆ ಪಿತ್ತ ನೆತ್ತಿಗೇರಿದಂತಾಗುತ್ತದೆ. ದುಗ್ಗನಲ್ಲಿ ಯಾವ ವ್ಯವಹಾರವನ್ನು ನಡೆಸಲು ಆತನ ಮನಸ್ಸೊಪ್ಪುತ್ತಿಲ್ಲ. ದುಗ್ಗನ ಮನೆ ಬಾಗಿಲು ತುಳಿಯಲೂ ಅಸಹ್ಯ ಎನ್ನುವಷ್ಟರ ಮಟ್ಟಿಗೆ ಆತನಲ್ಲಿ ಅಸಹನೆ. ಆದರೆ ಅಪ್ಪನ ಒತ್ತಾಯ ಹಾಗೂ ಅನುಕಂಪದ ದೃಷ್ಟಿಯಿಂದ ದುಗ್ಗನಲ್ಲಿಗೆ ಹೊರಡಲು ಒಪ್ಪುತ್ತಿದ್ದನಷ್ಟೇ. ದುಗ್ಗನಿಗೂ ಕೃಷ್ಣಪ್ಪನೆಂದರೆ ಅಷ್ಟಕಷ್ಟೇ. ಏನಿದ್ದರೂ ಕೃಷ್ಣಪ್ಪ ಖಾಲಿ ಕೈಯಲ್ಲಿ ಊರಲ್ಲಿರುವವ. ಪರವೂರಿನಲ್ಲಿರುವ ಕೃಷ್ಣಪ್ಪನ ಅಣ್ಣಂದಿರನ್ನು ದುಗ್ಗ ತೀರಾ ವಿಶ್ವಾಸ, ಭಯಭಕ್ತಿಯಿಂದ ಮಾತನಾಡಿಸುತ್ತಾನೆ. ಅವರೂ ದುಗ್ಗನನ್ನು ತೀರಾ ಆತ್ಮೀಯವಾಗಿ ಮಾತನಾಡಿಸುವುದಿದೆ. ದುಗ್ಗನಿಗೆ ಭೂತದ ಆವೇಶ ಬಂದ ಮೇಲಂತೂ ಅವರು, ಭಯಭಕ್ತಿಯಿಂದ ದುಗ್ಗ ಕೀಳುಜಾತಿಯವನೆಂಬ ಭೇದವನ್ನೇ ಮರೆತು ಭಕ್ತಿಯಿಂದ ಕಂಪಿಸಿ ನಮಸ್ಕರಿಸುವುದಿದೆ. ಆದರೆ ಕೃಷ್ಣಪ್ಪ ಭೂತಕ್ಕೆ ನಮಸ್ಕರಿಸುವ ಪರಿಪಾಠವನ್ನೇ ಬಿಟ್ಟುಬಿಟ್ಟಿದ್ದಾನೆ. ಆತ ಭೂತಕ್ಕೂ ತಲೆ ಅಡ್ಡ ಹಾಕಲೊಲ್ಲ, ದುಗ್ಗನಿಗೂ ಅಷ್ಟೆ.

'ಮುಖ ನೋಡಿ ಮಣೆ ಹಾಕುವ' ದುಗ್ಗನ ಬುದ್ಧಿಯ ಪರಿಚಯ ಕೃಷ್ಣಪ್ಪನಿಗೆ ಚೆನ್ನಾಗಿಯೇ ಇದೆ. ದುಗ್ಗ ಕೋಲ ಕಟ್ಟಿ ತನ್ನ ಬಿಡ್ಡೂ ಬಿಜಾರಗಳನ್ನ ಹೊತ್ತು ಹೊರಡಬೇಕಾದರೆ ಮುಂಬೈಯವರು ಭೂತ ಕಟ್ಟಿದ್ದಕ್ಕೆ ಹಣ ಮಾತ್ರವಲ್ಲದೆ, ಕಿಸೆಗೆ ಕೈತೂರಿಸಿ ಸಿಕ್ಕಷ್ಟು ಹಣವನ್ನು ಇನಾಮಾಗಿ ಕೊಟ್ಟು ಕಳುಹಿಸುವುದು ಅವರೆಲ್ಲರ ವಾಡಿಕೆ. ಕೃತಜ್ಞತಾಪೂರ್ವಕವಾಗಿ ದುಗ್ಗನೂ ಸಮಯ ಬಂದಾಗಲೆಲ್ಲಾ ಅವರ ಮುಂದೆ ಅವರ ದೊಡ್ಡ ಗುಣವನ್ನು ಪ್ರಶಂಸಿಸಿ, ಕೃಷ್ಣಪ್ಪನನ್ನು 'ಉಂಡಾಡಿ ಗುಂಡ' ಎಂದು ಜರೆಯಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ದುಗ್ಗ ತನ್ನ ಬಗ್ಗೆ ಲಘುವಾಗಿ ಮಾತನಾಡಿದಾಗಲೆಲ್ಲ ಕೃಷ್ಣಪ್ಪ ಕೋಪದಿಂದ ಕಂಪಿಸುತ್ತಿದ್ದನಷ್ಟೆ, ದುಗ್ಗ ಕೃಷ್ಣಪ್ಪರ ಸಂಬಂಧ ತೀರಾ ಕೆಡಲಾರಂಭಿಸಿದ್ದು ಹೀಗೆಯೇ.

★★★

ಕೊಳಕೆಯ ಕೊಯ್ಲು ಮುಗಿದು ಧಾನ್ಯಗಳೂ ಗದ್ದೆಯಿಂದ ಅಟ್ಟ ಸೇರಿಯಾಗಿತ್ತು. ಕೋಲಕ್ಕೆ ಬಾಕಿಯುಳಿದಿದ್ದು ಬರಿಯ ಮೂರು ದಿನಗಳು... ಮುಂಬೈಯಿಂದ ಮಾಯಿಲನ ಮಕ್ಕಳಾಗಲೇ ಕುಟುಂಬ ಸಮೇತರಾಗಿ ಬಂದಿಳಿದಿದ್ದರು. ಈಗ ಮನೆಯಲ್ಲೆಲ್ಲಾ ಅವರದೇ ಕಾರುಬಾರು, ಅವರು ಇಟ್ಟದ್ದು– ಅವರು ತೆಗೆದದ್ದು. ಮನೆಯೆಲ್ಲಾ ಮಕ್ಕಳಿಂದ ಗಿಜಿ ಗಿಜಿಗುಡುತ್ತಿರಬೇಕಾದರೆ ಕೃಷ್ಣಪ್ಪ ಸಂಪೂರ್ಣವಾಗಿ ಮೂಲೆಗುಂಪಾಗಿದ್ದ, ಒಬ್ಬಂಟಿಯಾಗಿದ್ದ.

ಮೂವತ್ತೆರಡು ವರ್ಷದ ಕೃಷ್ಣಪ್ಪನಿಗೆ ಇಂತಹ ಒಬ್ಬಂಟಿತನ, ಏಕಾಕಿತನ ಅಭ್ಯಾಸವಾಗಿಬಿಟ್ಟಿದೆ. ಜತೆಗೆ ಒಂಥರಾ ನಿರ್ಲಿಪ್ತತೆಯನ್ನೂ ಬೆಳೆಸಿಕೊಂಡು ಬಿಟ್ಟಿದ್ದ. ಅಣ್ಣಂದಿರು ಕೃಷ್ಣಪ್ಪನ ಮದುವೆಯ ಬಗ್ಗೆ ಮಾತೆತ್ತಿದರೆ ಮಾಯಿಲ ಹೇಳುತ್ತಾನೆ, 'ಇಸ್ಸಪ್ಪ, ಅವನಿಗೆ ಮದ್ವೆಯೋ ಮಸಣವೋ? ಮದ್ವೆ